"SATYAVADI" Founded 1917 Regd. No. M. 1299.

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 3] ಗುರು ವಾರ 13—9—45 [ಬಿಡಿ ಪ್ರತಿ 3 ಪೈ

ಕಸ್ತೂರಿ ಬಾ ಶಿಕ್ಷಣ
ಶಿಬಿರದ ಉದ್ಘಾಟನೋತ್ಸವ

ಮೈಸೂರು, ಸೆ 13

ಕಳೆದ ಸಂಜೆ ಸುಳು ಘಂಟೆಯುಲ್ಲಿರಾ ಜಧಾನಿಯು ಪಡುವಾರ ಹಳ್ಳಿಯ ಲ್ಲಿ ನಿರ್ಮಿಸಿರುವ ಕಸ್ತೂರಿ ಬಾ ಶಿಕ್ಷಣ ಶಿಬಿರದ ಉದ್ಘಾಟನೋತ್ಸವವು ಶ್ರೀಮತಿ ಲೋಕ ಸುಂದರಿಯಮ್ಮನವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಧ್ವಜವನ್ನು ಕೆಳಗೆ ಇಳಿಸಿದನಂತರ, ಶಿಬಿರದ ಸ್ವಯಂ ಸೇವಕಿಯರುಗಳಿಂದ ಪ್ರಾರ್ಥನೆಯಾಯಿತು.

ಮೈಸೂರು ಸಂಸ್ಥಾನದ ಬಾ ನಿಧಿಯ ಕಾರ್ಯದರ್ಶಿಯವರಾದ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರು ಭಾಷಣ ಮಾಡುತ್ತಾ ' ಕಸ್ತೂರಿ ಬಾರವರಿಗೆ ಹಳ್ಳಿಗರ ಮೇಲೆ ಅಗಾಧ ಮಮತೆಯಿದ್ದಿತು ' ಅದನ್ನು ಆರಿತೇ ಪೂಜ್ಯ ಗಾಂಧೀಜೀಯವರು, ಈ ನಿಧಿಯನ್ನು ಹಳ್ಳಿಗಳಿಗಾಗಿಯೇ ವಿನಿಯೋಗಿಸ ಬೇಕೆಂದು ಸೂಚಿಸಿರುವರು. ಈ ನಿಧಿಯು ಸದ್ವಿನಿಯೋಗವಾಗಬೇಕು. ಇಲ್ಲಿ ಶಿಕ್ಷಣ ಪಡೆಯಲು ಬಂದಿರುವವರಲ್ಲಿ ಒಬ್ಬರಾದರೂ ಬಾ ರವರಂತೆ ಹೆಸರು ಪಡೆಯು ಬೇಕು ' ಎಂದರು.

ಮೈಸೂರು ಸಂಸ್ಥಾನದ ಕಸ್ತೂರಿ ಬಾ ನಿಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಎಲ್. ಎಸ್. ವೆಂಕಾಜಿರಾಯರು ಮಾತನಾಡುತ್ತಾ ' ಶ್ರೀಮತಿ ಲೋಕಸುಂದರಿ ರಾವ್ ರವರು ಅನೇಕ ದೇಶಗಳನ್ನು ಸುತ್ತಿ, ಬಹಳ ಅನುಭವ ಪಡೆದಿರುವರು. ಈ ಸಮಾರಂಭಕ್ಕೆ ಅಧ್ಯಕ್ಷತೆಯನ್ನು ವಹಿಸಿದ್ದಕ್ಕಾಗಿ ನಮ್ಮ ಅಭಿನಂದನೆಗಳು. ಸ್ತ್ರೀಯರ ಉತ್ಸವಕ್ಕೆ ಸ್ತ್ರೀಯು ಅಧ್ಯಕ್ಷತೆ ವಹಿಸಿದ್ದು ಬಹಳ ಸಂತೋಷವಾದ ವಿಷಯ ' ಎಂಬುದಾಗಿ ಹೇಳಿದರು.

ಶ್ರೀಮತಿ ಲೋಕ ಸುಂದರಿ ರಾಮನ್‌ರವರು ತಮ್ಮ ಅಧ್ಯಕ್ಷೆ ಭಾಷಣದಲ್ಲಿ, ವಿನೋದವಾಗಿ, ತಮಿಳು ಭಾಷೆಯ ಉಚ್ಚಾರದಲ್ಲಿ ಕನ್ನಡದಲ್ಲಿ ಮಾತನಾಡುತ್ತಾ ' ಬೊಂಬಾಯಿನಲ್ಲಿ ನಡೆದ ಕಸ್ತೂರಿ ಬಾ ಸಭೆಗೆ ಹೋಗಬೇಕೆಂಬ ಆಸೆ ನನಗಿತ್ತು. ನನ್ನ ಗಂಡ ಅದೆಲ್ಲ ಯಾಕೆ ಅಂತ ಕಡಿದ್ಬಿಟ್ರು. ನಾನೆಲ್ಲು ಹೋಗೂದು ಅವರಿಷ್ಟಕ್ಕೆ ವಿರೋಧ ಈಗ್ಲೂ ಸಹಾ ಹೋಗ್ಬಾಡಾಂದ್ರು. ಆದರೂ ನಾನು ಬಂದೆ. ಈ ರೀತಿ ಗಂಡದ್ರು ಮಾತ್ಕೇಳ್ಡು. ಹೆಂಡತಿಯರನ್ನು ಇಂಥಾ ಕಡೆಗೆಲ್ಲ ಕಳಿಸಬೇಕು ಹೆಂಡತಿಯರಿಲ್ಲದ ಸಮಾಜದಲ್ಲಿ ಗಂಡಂದಿರು ಮಕ್ಕಳು ಮರಿಗಳನ್ನು ಅಳದಾಡಿಸಮುದಾಯಿಸ ಬೇಕು ' ಎಂದರು.

5 ವರ್ಷಗಳಲ್ಲಿ ಭಾರತಕ್ಕೆ ಸ್ವಾತಂತ್ರ್ಯವೇ

ರಾಜಧಾನಿ

ಸ್ವ. ಸು.] ಮೈಸೂರು, ಸೆ 13

ಕಛೇರಿಗಳಿಗೆ ರಜಾ

ಶ್ರೀಮನ್ಮಹಾರಾಜರವರ ಸಟ್ಟಾಭಿಷೇಕವಾದ ಐದನೇ ವರ್ಷದ ಸಲುವಾಗಿ, ಈ ದಿವಸ ಅರಮನೆ ಕಛೇರಿಗಳಿಗೆ ರಜಾ ಕೊಡಲಾಗಿದೆ. ಅರಮನೆ ಸೌಕರರೆಲ್ಲರೂ ರೇಸ್ ಕೋರ್ಸ್ ಮೈದಾನದಲ್ಲಿ ಈ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸುವರು.

ಪ್ರದರ್ಶನ

ನಿನ್ನೇ ದಿವಸ ನಡೆದ ಕಸ್ತೂರಿ ಬಾ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಚರಕ ಮುಂತಾದವುಗಳ ಪ್ರದರ್ಶನಗಳನ್ನೇರ್ಪಡಿಸಲಾಗಿತ್ತು.

ಕುಡುಕರ ಗಲಾಟೆ

ಮೊತೀಬಾನೆಯೆದುರಿನ ದೊಡ್ಡರಸ್ತೆಯಲ್ಲಿ ಕುಡುಕರ ಗಲಾಟೆ ಹೆಚ್ಚಿ ಸಂಚಾರಿಗಳಿಗೆ ತೊಂದರೆಯಾಗಿದೆ.

ಉಪಹಾರ

ನಾಳೆ ದಿವಸ ೧೧ ಘಂಟೆಗೆ ಪ್ರಜಾಮತ ಮತ್ತು ಜನವಾಣಿ ಕಛೇರಿಗಳನ್ನು ತೆಗೆದ ಸಂತೋಷಾರ್ಥವಾಗಿ ಒಂದು ಉಪಹಾರ ಕೂಟವನ್ನೇರ್ಪಡಿಸಿರುವರು.

ಮಂಗಳಾರತಿ

ಈ ದಿವಸ ಸಂಜೆ ಸುಬ್ರಾಯನ ಕೆರೆಯ ರಸ್ತೆಯಲ್ಲಿರುವ ಕಮರ್ಷಿಯಲ್ ಏಜನ್ಸಿಯಲ್ಲಿ ಗಣೇಶನ ಮಂಗಳಾರತಿಯು ವೈಭವದಿಂದ ನಡೆಯುವುದು.

ಸೆಲೂನ್ ಕುರ್ಚಿಯಲ್ಲಿ ಓದಬಾರದು

ವಿಚಿಗನದಲ್ಲಿರುವ ಪೊಂಟಿಯಾಕ್ ಎಂಬಲ್ಲಿ ' ಸ್ಟೇಟ್ ಬಾರ್ಬರ್ಸ್ ಎಸೋಸಿಯೇಷನ್ ' ಎಂಬ ಹೆಸರಿನಲ್ಲಿ ಕ್ಷೌರಿಕರ ಒಂದು ದೊಡ್ಡ ಸಂಘವಿದೆ. ಆ ಸಂಘವು ಇತ್ತೀಚೆಗೆ ಒಂದು ಮಹತ್ವದ ಠರಾವನ್ನು ಮಂಜೂರು ಮಾಡಿದೆ. ಕ್ಷೌರಿಕರ ಕುರ್ಚಿಯಲ್ಲಿ ಕುಳಿತು ಓದುವ ಕ್ರಮ ಒಂದು ಇದೆಯೆಷ್ಟೆ. ಆ ರೀತಿಯ ಓದು ನಿಲ್ಲಬೇಕೆಂದು ಮೇಲಿನ ಠರಾವು ಅನ್ನುತ್ತದೆ. ಕ್ಷೌರ ತೆಗೆಯುವ ಕಾಲದಲ್ಲಿ ಓದುವಿಕೆಯ ಕಡೆಗೆ ಲಕ್ಷ್ಯಗೊಟ್ಟರೆ ಓದುವವನ ಕೃತ್ತಿಗೆಯ ನರಗಳು ಬಗಿಯುವ ತ್ತವೆ ಎಂಬ ಕಾರಣ ಕೊಟ್ಟು ಕ್ಷೌರಿಕ ಸಂಘವು ಹೊಸ ಠರಾವನ್ನು ಮಂಜೂರು ಮಾಡಿತು.

ಪತ್ರಿಕಾ ಸ್ವಾತಂತ್ರ್ಯವೇ ಮುಖ್ಯ

ವಾಷಿಂಗ್ಟನ್, ಸೆ 9 — ಕ್ಯಾಲಿಫರ್ನಿಯಾದ ಹೊಸ ಸೆನೇಟರ್ ಮಿ। ಸೊಲ್ಯಾಂಡರು, ಶಾಂತಿ ಸ್ಥಿರಸ್ಥಾಯಿ ಮಾಡಲು ಪ್ರಪಂಚದಲ್ಲೆಲ್ಲಾ ಪತ್ರಿಕಾ ಸ್ವಾತಂತ್ರ್ಯವೇ ಮುಖ್ಯ ಎಂಬುದಾಗಿ ಹೇಳಿರುವರು. (ಯು. ಎಸ್.)

ಇಂಡಿಯನ್ ನೇಷನಲ್ ಆರ್ಮಿ

ಕಲ್ಕತ್ತಾ, ಸೆ 11 — ಜಪಾನರ ಪಕ್ಷ ಸೇರಿದ ನ್ಯಾಷನಲ್ ಆರ್ಮಿಯ ಸೈನಿಕರು ಈಗ ರಂಗೂನ್ ನಗರದ ಬೀದಿ ಗುಡಿಸುತ್ತಿರುವರೆಂದು ಬೊಂಬಾಯಿ ಜನ್ಮಭೂಮಿ ಪತ್ರಿಕಾ ಸಂಪಾದಕ ಶ್ರೀ ಅಮೃತಲಾಲ್ ಸೇಟರು ತಿಳಿಸಿರುವರು.

ಭಾರತ ಸ್ಕೌಟ್ ಸಮ್ಮೇಳನ

ತಿರುವಾಂಕೂರಿನಲ್ಲಿ ಭಾರತ ಸ್ಕೌಟ್ ಸಮ್ಮೇಳನವು ಇದೇ 19 ನೇ ತಾರೀಖುಗಳಲ್ಲಿ ನಡೆಯುವುದಷ್ಟೆ. ಅದಕ್ಕೆ ಸಂಸ್ಥಾನದ ಪರವಾಗಿ ಶ್ರೀ ಜಿ. ಬಿ. ಮಲ್ಲಾರಾಧ್ಯರು ಮತ್ತು ಹನ್ನೆರಡು ಮಂದಿ ಸ್ಕೌಟ್‌ಗಳು ಹೋಗುವರು.

ವೂನಾ ಸೆ 11 — ಬ್ರಿಟಿಷರು ಭಾರತಕ್ಕೆ 5 ವರ್ಷಗಳಲ್ಲಿ ಸ್ವಾತಂತ್ರ್ಯ ಕೊಡದಿದ್ದರೇ ಭಾರತೀಯರೇ ತೆಗೆದುಕೊಳ್ಳಬಹುದೆಂದು ಸರದಾರ್ ಪಟೇಲರು ಗಂಭೀರವಾದ ಘೋಷಣೆ ಮಾಡಿದರು.

ಜಪಾನ್ ಯುದ್ಧಕ್ಕೆ
ಟೋಜೋ ಕಾರಣನೇ ?

ಜಪಾನ್ ಮಾಜಿ ಮುಖ್ಯ ಮಂತ್ರಿ ಟೋಜೋರವರು ಆತ್ಮಹತ್ಯ ಮಾಡಿಕೊಳ್ಳುವುದರಲ್ಲಿ ವಿಫಲರಾದರು. ಈಗ ಯು ಕೋಹಾಮ ಮಿಲಿಟರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಅವರಿಗೆ ಇಪ್ಪತ್ತು ಸಾವಿರ ಯೂನಿಟ್‌ಗಳಷ್ಟು ಪೆಸಿಲಿನ್ ಪ್ರಯೋಗ ಮಾಡಿರುವುದಾಗಿ ವರದಿಯಾಗಿದೆ. ಅವರು ಆಸ್ಪತ್ರೆಯಲ್ಲಿ ಪ್ರಜ್ಞೆ ಬಂದ ಮೇಲೆ ಹತ್ತಿರದಲ್ಲಿದ್ದ ಅಮೇರಿಕಾ ಪತ್ರಿಕಾ ಪ್ರತಿನಿಧಿಗಳಿಗೆ ' ಯುದ್ಧಕ್ಕೆ ನಾನೇ ಜವಾಬ್ದಾರ ' ಎಂದು ತಿಳಿಸಿರುವನು.

ಸಚಿವರ ಪ್ರವಾಸ

ಸಂಸ್ಥಾನದ ನ್ಯಾಯಾಂಗ ಸಚಿವರಾದ ಮಿ। ಹೂಪರು ಇದೇ 19 ರಿಂದ 33 ರವರೆಗೆ ಚಿತ್ರದುರ್ಗ ಪ್ರವಾಸ ಮಾಡುವುದಾಗಿ ತಿಳಿಯಬಂದಿದೆ.

ಮಂಗಳಾರತಿ

ಮೈಸೂರು, ಸೆ 13

ಬಜ್ಜಣ್ಣಾ ಲೈನಿನಲ್ಲಿರುವ ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿಗಳು ನಿನ್ನೆಯ ದಿವಸ ಸಂಜೆ ಗೆಣೇಶನ ಮಂಗಳಾರತಿಯನ್ನು ತಮ್ಮ ಗೃಹದಲ್ಲಿ ವಿಜೃಂಭಣೆಯಿಂದ ನೆರವೇರಿಸಿದರು.

ವೈತ್ತಾಂತ ಸಂಗ್ರಹ

ಬೊಂಬಾಯಿನಲ್ಲಿ ಐದು ಲಕ್ಷ ಮಂದಿ ನಿರುದ್ಯೋಗಳಾಗಿರುವರೆಂದು ಹೇಳಲಾಗಿದೆ.

ಂ ಂ

ಸಯಾಂನಲ್ಲಿ ಜಪಾನರು ಶರಣಾಗುತ್ತಿರುವುದಾಗಿ ಬ್ಯಾಂಕಾಕ್ ವಾರ್ತೆ ತಿಳಿಸುವುದು.

ಂ ಂ

ಹಾಸನದಲ್ಲಿ ಪ್ಲೇಗಿನ ಪರಿಣಾಮವಾಗಿ ಐದು ವಾರಗಳ ವರೆವಿಗೆ ಸಂತೆ ನಿಲ್ಲಿಸಲ್ಪಟ್ಟಿದೆ.

ಂ ಂ

ಚನ್ನಪಟ್ಟಣದಲ್ಲಿ ೪ ದಿವಸಗಳಿಂದ ಸಕ್ಕರೆ ಅಭಾವದ ಪ್ರಯುಕ್ತ ಬೆಲ್ಲದ ಕಾಫಿ, ಟೀ ಕೊಡಲಾಗುತ್ತಿದೆ.

ಪ್ರತಿನಿಧಿಗಳ ಅಧಿವೇಶನ

ಲಂಡನ್, ಸೆ 9 — ಇಂಟರ್ ನ್ಯಾಷನಲ್ ಕೊ-ಆಪರೇಟೀವ್ ಅಲೆಯಿನ್ಸಸ ಮೊದಲನೇ ಅಧಿವೇಶನ ಪ್ರಪಂಚದ ಹಲವು ಶಾಖೆಗಳ ಪ್ರತಿನಿಧಿಗಳಿಂದ ಕೂಡಿ, ಸೋಮವಾರದ ದಿವಸದಿಂದ ಪ್ರಾರಂಭವಾಗುವುದು. (ಯು. ಎಸ್.)

ನಿರಾಧಾರ ಸುದ್ದಿ

ನವದೆಹಲಿ, ಸೆ 11 — ರೈಲು ಚಾರ್ಜು ಮುಂದಿನ ತಿಂಗಳಲ್ಲಿ ಹೆಚ್ಚಿಸಲಾಗುವುದೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿ ನಿರಾಧಾರವಾದುದೆಂದು ಹೇಳಲಾಗಿದೆ.

ಟಾಂಗ್ಕಾ ಕಡೆಯಲ್ಲಿ ಭಾರತ ಸೈನಿಕರು ಹೋಗುತ್ತಿರುವುದು

ಸ ತ್ಯ ವಾ ದಿ

ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ ೫ ಅಣೆ

ಕೂಡಲೇ ಚಂದಾದಾರರಾಗಿ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಒರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ

ಚಾಮರಾಜಪುರಂ ಮೈಸೂರು

ನೈರ್ಮಲ್ಯವೆ ಆರೋಗ್ಯದ ಅಡಿಗಲ್ಲು

" ನಿಮ್ಮ ಮಕ್ಕಳು ಆರೋಗ್ಯವಂತರಾಗಿಯೂ, ಚಿರಂಜೀವಿಗಳಾಗಿಯೂ ಇರಬೇಕೇ "?

ಹಾಗಾದರೆ

ನಿಮ್ಮ ಮನೆಗಳನ್ನು, ನಿಮ್ಮ ಬೀದಿಗಳನ್ನು, ನಿಮ್ಮ ಮೊಹಲ್ಲವನ್ನು ಚೊಕ್ಕಟವಾಗಿಡಿರಿ. ಕಸವನ್ನು ಮುನಿಸಿಪಾಲಿಟಿ ತಿಪ್ಪೆಗೆ ಹಾಕಿ.

] ಪೌರಸಭಾ ಪ್ರಚಾರಸಮಿತಿ, ಮೈ.]

AT Opera—

2 ನೇ ವಾರ

GEET

(Hindi)

With Sahu Modak & Nirmala

At Ranjit

From 7-9-45

Humayun

ರಣಜಿತ್ ಟಾಕೀಸಿನಲ್ಲಿ

ಮೆಹಬೂಬ್ ರವರ

... ಹುಮಾಯೂನ್....

(ಹಿಂದಿ)

ಅಶೋಕ ಕುಮಾರ್, ಜಂದ್ರಮೋಹನ್ ವೀಣಾ, ನರ್ಗಿಸ್, ಪ್ರಾಣವಾಸ್ ಪಾತ್ರವಹಿಸಿರುವರು

ಪ್ರತಿದಿನ ೩ ಆಟಗಳು

Edited, Printed and published by M. S. Krishna Rao, at the Satvavadi Press, Chamareja Agrahar, Mysore.

ಬೊಂಬಾಯಿ ಗವರ್ನರರ ಭಾಷಣ

ಬೊಂಬಾಯಿನಲ್ಲಿ ಪದವೀಧರರನ್ನು ಕುರಿತು ಗೌರ್ನರರು ಮಾಡಿದ ಭಾಷಣ ಮುಖ್ಯಾಂಶ:—

ಹಿಂದೂಸ್ಥಾನಕ್ಕೆ ಗಂಡಾತರ ತಪ್ಪಿತು

' ಇನ್ನು ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ನಡೆದ ಪದವೀದಾನ ಸಮಾರಂಭದ ನಂತರ ನಡೆದ ಚಾಗತಿಕ ಘಟನೆಗಳ ಕಡೆಗೆ ಸ್ವಲ್ಪ ಹೊಂಳೋಣ. ಇಪ್ಪೊಂದು ರಕ್ತಸಾತ ಮತ್ತು ಶಾಂತಭಂಗಕ್ಕೆ ಕಾರಣರಾಗ ಹಿಟ್ಲರ್ ಮತ್ತು ಮುಸಲೋನಿ ಇವರು ಮಡಿದರು. ಜಗತ್ತಿನಲ್ಲಿ ಅತ್ಯಂತ ಬಲಾಢ್ಯ ಸೈನ್ಯವನ್ನು ಕೂಡಿಸಿದ್ದ ಜರ್ಮನಿಯು ಸಂಪೂರ್ಣವಾಗಿ ಸೋಲಿಸಲ್ಪಟ್ಟಿತು. ಹಿಂದುಸ್ಥಾನ ಮತ್ತು ಚೀಣಕ್ಕೆ ಗಂಡಾತರವನ್ನು ಒಡ್ಡಿದ್ದ ಜಪಾನು ಕಂತಾರು ಇಲ್ಲದೆ ಶರಣು ಬರಲಿಕ್ಕೆ ಹಚ್ಚಲ್ಪಟ್ಟಿತು. ರಷಿಯವು ಯುದ್ಧದಲ್ಲಿ ಧುಮುಕಿದ್ದು ಮತ್ತು ಏಟಂ ಬಾಂಬಿನ ಕೋಲಾಹಲದ ಮೂಲಕ ಅದರ ಪ್ರತಿಭಟನೆಯು ನಿಶ್ಚಯವು ಮಾಯು ವಾಯಿತು, ಇತ್ತ ಮಿತ್ರ ಛಾವಣಿಯಲ್ಲಿಯೂ ಎರಡು ದುಃಖದಾಯಕ ಸಂಗತಿಗಳು ಘಟಿಸಿದವು. ಜರ್ಮನಿ ಮತ್ತು ಜಪಾನುಗಳ ಸೋಲು ಸಂಭವಿಕೆದಕ್ಕೆ ಕೆಲವೇ ತಿಂಗಳು ನೊದಲು ಅಧ್ಯಕ್ಷ ರೂಸ್ವೆಲ್ಟರು ಮಡಿದರು. ಆದರೆ ಅವರೇ ತಮ್ಮ ದೇಶಬಂಧುಗಳನ್ನು ವಿಜಯ ಮಾರ್ಗದಲ್ಲಿ ತಪ್ಪದೆ ತಂದು ನಿಲ್ಲಿಸಿದರು. ಜಪಾನಕ್ಕೆ ಸೋಲು ಪ್ರಾಪ್ತವಾಗುವುದಕ್ಕೆ ಕೆಲವೇ ವಾರ ಮೊದಲು ಬ್ರಿಟನ್ನನ್ನು ಅತ್ಯಂತ ಗಂಡಾಂತರದ ಕಾಲದಲ್ಲಿ ಕಾಯುತ್ತಾ ಬಂದಿದ್ದ ವಿನ್ಸ್ಟನ್ ಚರ್ಚಿಲರು ತಮ್ಮ ಸ್ಥಾನವನ್ನು ಜನತಾವಣೆಯಲ್ಲಿ ಕಳೆದು ಕೊಂಡರು ' ಎಂಬುದಾಗಿ ಹೇಳಿದರು. ಯಶಸ್ಸನ್ನು ಪಡೆಯ ಬೇಕಾದರೆ ವಯಸ್ಸು ಮುಖ್ಯ ವಲ್ಲವೆಂದೂ, ಅನುಭವ, ಬುದ್ಧಿ ಕುಶಲತೆಗಳು ಅವಶ್ಯಕವೆಂದು ಪಿಟ್ಟನ್ನನ ಉದಾಹರಣೆಯನ್ನು ಹೇಳಿದರು. ನಿಮ್ಲಾ ಪರಿಶತ್ತು ಪರಾಜಯವಾದರೂ, ವೇವಲ್ಲರ ಮುಂದಾಳತ್ವವೆಂತಹುದೆಂಬುದನ್ನು ಭಾರತ ಅರಿತಿತು ಎಂದರು. ವಿದ್ಯಾರ್ಥಿಯು ಪ್ರಪಂಚದಲ್ಲಿ ಸ್ವತಂತ್ರ ಮತ್ತು ಸ್ವಾವಲಂಬಿ ವ್ಯಕ್ತಿಯಾಗಿ ರಾಜಕೀಯದಲ್ಲಿ ಪ್ರವೇಶಿಸಬೇಕೆಂದು ಪದವೀಧರರಿಗೆ ಅಭಿಸಂದಿಸಿದರು.

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪಥಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಪಾತರಿಯಾದುದು. ವಿವರಗಳಿಗೆ ಮತ್ತು ಪ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.